ರಾಜೀವ್ ಚಂದ್ರಶೇಖರ್

ಸಂಸತ್ ಸದಸ್ಯರು

04ನೇ ನವೆಂಬರ್ 2019

ಶ್ರೀ ಅನಿಲ್ ಕುಮಾರ್ ರವರೇ,

**ವಿಷಯ: ವಸತಿ ಪ್ರದೇಶಗಳಲ್ಲಿನ ಮಿತಿ ಮೀರಿದ ಅಕ್ರಮ ವಾಣಿಜ್ಯೀಕರಣದ ವಿರುದ್ಧ ನಗರದ ನಾಗರೀಕರು ಮತ್ತು ನಿವಾಸಿ ಕ್ಷೇಮಾಭಿವೃದ್ಧಿ ಸಂಘ(ಆರ್.ಡಬ್ಲೂ.ಎ) ಗಳ ದೂರುಗಳ ಕುರಿತು.**

ನಗರದ ನಾಗರೀಕ ಸಂಘ-ಸಂಸ್ಥೆಗಳು ವಸತಿ ಪ್ರದೇಶಗಳಲ್ಲಿನ ಮಿತಿಮೀರಿದ ಅಕ್ರಮ ವಾಣಿಜ್ಯೀಕರಣದ ವಿರುದ್ಧ ಸಲ್ಲಿಸಿರುವ ದೂರುಗಳ ಉಲ್ಲೇಖದೊಂದಿಗೆ ತಮಗೆ ಪತ್ರವನ್ನು ಬರೆಯುತ್ತಿದ್ದೇನೆ. ತಮಗೆ ತಿಳಿದಿರುವಂತೆ ಅನೇಕ ಸಂದರ್ಭಗಳಲ್ಲಿ ಇಂತಹ ಅಕ್ರಮ ವಾಣಿಜ್ಯ ಚಟುವಟಿಕೆಗಳು ನಿವಾಸಿ ಪ್ರದೇಶಗಳಲ್ಲಿ ತಲೆ ಎತ್ತಿ, ಆ ಪ್ರದೇಶಗಳಲ್ಲಿ ಮುಗ್ಧ ನಿವಾಸಿಗಳು ಮತ್ತು ಅವರ ಕುಟುಂಬಗಳು ಅಪರಾಧ, ಕಾನೂನು ಮತ್ತು ಸುವ್ಯವಸ್ಥೆ ಮತ್ತು ಇತರ ತೊಂದರೆಗಳಿಂದ ನೆಮ್ಮದಿಯ ಜೀವನ ಸಾಗಿಸಲು ಕಷ್ಟಪಡುತ್ತಿದ್ದಾರೆ.

ತಮಗೆ ತಿಳಿದಿರುವಂತೆ ದಿನಾಂಕ 06, ಸೆಪ್ಟೆಂಬರ್ 2019 ರಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್ ಯಡಿಯೂರಪ್ಪ ನವರ ಅಧ್ಯಕ್ಷತೆಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳಾದ ಡಾ.ಸಿ.ಎನ್ ಅಶ್ವಥ್ ನಾರಾಯಣರವರು ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ವಿಜಯ್ ಭಾಸ್ಕರ್ ರವರ ಜೊತೆಯಲ್ಲಿ ಹಾಗೂ ತಾವು ಸಹ ಹಾಜರಿದ್ದ ಸಭೆಯಲ್ಲಿ ಅಕ್ರಮ ವಾಣಿಜ್ಯೀಕರಣದ ಸಮಸ್ಯೆಗಳ ಬಗ್ಗೆ ನಾನು ಮತ್ತು ನಗರದ ಇತರ ಜನಪ್ರತಿನಿಧಿಗಳು ಪ್ರಸ್ತಾಪಿಸಿದೆವು. ಇದಕ್ಕೆ ಪೂರಕವಾಗಿ ಸ್ಪಂಧಿಸಿದ ಮಾನ್ಯ ಮುಖ್ಯಮುಂತ್ರಿಗಳು ವಸತಿ ಪ್ರದೇಶಗಳಲ್ಲಿ ವಲಯ ನಿಯಮಗಳನ್ನು ಉಲ್ಲಂಘಿಸಿ ಕಾನೂನುಬಾಹಿರವಾಗಿ ನಡೆಸುತ್ತಿರುವ ಬಾರ್‌ಗಳು, ಪಬ್‌ಗಳು, ಮಸಾಜ್ ಪಾರ್ಲರ್‌ಗಳು, ರೆಸ್ಟೋರೆಂಟ್‌ಗಳು ಮತ್ತು ಇತರ ವಾಣಿಜ್ಯ ಸಂಸ್ಥೆಗಳ ಮೇಲೆ ತಕ್ಷಣ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ತಮಗೆ ಸೂಚನೆ ನೀಡಿದ್ದರು.

ಕಾನೂನುಬಾಹಿರ ವಾಣಿಜ್ಯ ಚಟುವಟಿಕೆಗಳು/ಸಂಸ್ಥೆಗಳ ಬಗ್ಗೆ ದೂರುಗಳನ್ನು ಲಿಖಿತವಾಗಿ ನೋಂದಾಯಿಸಲು ನಾನು ನಾಗರಿಕರು ಮತ್ತು ನಾಗರೀಕ ನಿವಾಸಿ ಕ್ಷೇಮಾಭಿವೃದ್ಧಿಗಳಿಗೆ ಕರೆ ನೀಡಿದ್ದೆನು. ಸಂಬಂಧಪಟ್ಟ ಜಂಟಿ ಆಯುಕ್ತರು ಅಂತಹ ದೂರುಗಳ ಬಗ್ಗೆ 7 ದಿನಗಳಲ್ಲಿ ಕಾರ್ಯನಿರ್ವಹಿಸದಿದ್ದರೆ, ದೂರಿನ ಪ್ರತಿಯನ್ನು ನನ್ನ ಕಛೇರಿಗೆ ತಲುಪಿಸಲು ನಾನು ಅವರಿಗೆ ತಿಳಿಸಿದ್ದೆ.

ಇದರ ಆಧಾರದ ಮೇಲೆ ಕಾನೂನುಬಾಹಿರ ಅಕ್ರಮ ವಾಣೀಜ್ಯೀಕರಣದ ಬಗ್ಗೆ ನಾಗರಿಕರು ಮತ್ತು ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳಿಂದ ಸುಮಾರು 120 ಕ್ಕೂ ಹೆಚ್ಚು ದೂರುಗಳನ್ನು ಸ್ವೀಕರಿಸಿದ್ದೇನೆ. ಇದರ ಮೇಲೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಕಾನೂನು ಉಲ್ಲಂಘನೆಯನ್ನು ವರದಿ ಮಾಡುವ ನಾಗರಿಕರಿಗೆ ಬಿಬಿಎಂಪಿ

11ನೇ ಮಹಡಿ, ದೊಡ್ಡ ಗೋಪುರ, ಸರ್.ಎಂ.ವಿಶ್ವೇಶ್ವರಯ್ಯ ಕೇಂದ್ರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL

सत्यमेव जयते

ಸ್ಪಂದಿಸುವಿಕೆಯ ಬಗ್ಗೆ ಗಂಭೀರ ಪ್ರಶ್ನೆಗಳು ಉದ್ಭವಿಸುತ್ತವೆ - ಕಾನೂನನ್ನು ಎತ್ತಿಹಿಡಿಯುವುದು ಬಿಬಿಎಂಪಿಯ ಗಂಭೀರ ಬಾಧ್ಯತೆಯಾಗಿದೆ.

ನಮ್ಮ ನಗರವು ನಾಗರಿಕರು ಮತ್ತು ಕಾನೂನುಗಳು ಮೇಲುಗೈ ಸಾಧಿಸುವ ನಗರ ಎಂದು ಖಚಿತಪಡಿಸಲು ನಾನು ಮತ್ತು ಈ ಸರ್ಕಾರ ಬಲವಾಗಿ ನಂಬಿದ್ದೇವೆ. ಆದ್ದರಿಂದ, ನಾನು ಈ ಕೆಳಕಂಡ ವಿಷಯಗಳ ಮೇಲೆ ಕ್ರಮಕ್ಕಾಗಿ ವಿನಂತಿಸುತ್ತಿದ್ದೇನೆ:

1. a) ಈ ರೀತಿಯ ಅಕ್ರಮ ವಾಣಿಜ್ಯ ಚಟುವಟಿಕೆಗಳನ್ನು ತಕ್ಷಣ ತಡೆಯಲು ಮತ್ತು ಪಾರದರ್ಶಕತೆಯಾಗಿರಲು ಎಲ್ಲಾ ವಲಯ ಹೆಚ್ಚುವರಿ ಆಯುಕ್ತರು / ಜಂಟಿ ಆಯುಕ್ತರು, / ಎಸ್‌ಇ ಗಳಿಗೆ ನಿರ್ದೇಶನ ನೀಡಬೇಕು.

   b) ದೂರುಗಳು ಮತ್ತು ಅವುಗಳ ಮೇಲೆ ಕ್ರಮ ತೆಗೆದುಕೊಳ್ಳಲು ಸರಿಯಾದ ಪ್ರಕ್ರಿಯೆಯನ್ನು ಅನುಸರಿಸಬೇಕು. ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಬಿಬಿಎಂಪಿ ವೆಬ್ ಸೈಟ್ ನಲ್ಲಿ ಪ್ರಕಟಿಸಬೇಕು.

   c) ಬಿಬಿಎಂಪಿಯಲ್ಲಿನ ಭ್ರಷ್ಟ ವ್ಯಕ್ತಿಗಳು ಈ ದೂರುಗಳ ಬಗ್ಗೆ ಹಣವನ್ನು ಮತ್ತು ಲಂಚವನ್ನು ಪಡೆಯಲು ಬಳಸುತ್ತಾರೆ ಎಂದು ತಿಳಿದುಬಂದಿದೆ. ಅಂತಹ ಅಕ್ರಮಗಳನ್ನು ಕೊನೆಗೊಳಿಸಲು ನೀವು ಕ್ರಮಗಳನ್ನು ತೆಗೆದುಕೊಳ್ಳಬೇಕು.

2. ವಸತಿ ಪ್ರದೇಶಗಳಲ್ಲಿನ ಎಲ್ಲಾ ಕಾನೂನುಬದ್ಧ ವಾಣಿಜ್ಯ ಚಟುವಟಿಕೆಗಳಿಗೆ ಬಿಬಿಎಂಪಿ ತುರ್ತಾಗಿ ಮಾರ್ಗಸೂಚಿಗಳು ಮತ್ತು ನಿಯಮಗಳನ್ನು ತರಬೇಕು

3. ಬೆಂಗಳೂರು ನಗರಕ್ಕೆ ಸೇವೆ ಸಲ್ಲಿಸುವ ಜವಾಬ್ದಾರಿಯು ಬಿಬಿಎಂಪಿಯ ಮೇಲಿರುತ್ತದೆ ಮತ್ತು ಬಿಬಿಎಂಪಿಯಲ್ಲಿ ಹೊಣೆಗಾರಿಕೆ ಮತ್ತು ಪಾರದರ್ಶಕತೆಯ ಸಂಸ್ಕೃತಿಯನ್ನು ಜಾರಿಗೆ ತರಲು ನಿಮ್ಮನ್ನು ಒತ್ತಾಯಿಸುತ್ತೇನೆ.

ತಾವು ಈ ಎಲ್ಲಾ ಅಕ್ರಮಗಳ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ತಿಳಿಸುವುದು

ತಮ್ಮ ವಿಶ್ವಾಸಿ

ರಾಜೀವ್ ಚಂದ್ರೇಖರ್

ಶ್ರೀ ಬಿ.ಹೆಚ್ ಅನಿಲ್ ಕುಮಾರ್, ಭಾ.ಆ.ಸೇ.
ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎನ್ ಆರ್ ವೃತ್ತ, ಬೆಂಗಳೂರು-560002